

ಭಯದಲ್ಲಿ ಬಾಯಿ ಬಿಡದೆ ಅಲ್ಲಿಂದ ತಪ್ಪಿಸಿಕೊಂಡೆವು. ಈ ಇಳಿವಯಸ್ಸಿನಲ್ಲೂ ಚಲ ಬಿಡದೆ ದುಡಿಯುವ ಅವರ ಇಚ್ಛಾಶಕ್ತಿ ತುಂಬಾ ಇಷ್ಟ. ಅವರು ಕೊಡುವ ಹುಳಿಯಾದ ಒಗ್ಗರಣೆ ಮಜ್ಜಿಗೆ ಎಲ್ಲಿ ಹುಡುಕಿದರೂ ಸಿಗುತ್ತಲೇ ಇಲ್ಲ.

ಹೈವೆಗಳಲ್ಲಿ ಸಿಗುವ ಪಂಜಾಬಿ ಡಾಭಾಗಳು, ಬೆಂಗಳೂರಿನ ದೇವನಹಳ್ಳಿ ರಸ್ತೆಯಲ್ಲಿ ಆರಂಭವಾಗಿರುವ ಮುಂಜಾನೆ ಐದುಗಂಟೆಗೆ ಸಿಗುವ ಬಿಸಿಬಿಸಿ ಬಿರಿಯಾನಿ ಊಟದ ನವಿರನ್ನು ಮತ್ತಷ್ಟು ಹೆಚ್ಚಿಸುವ ಪ್ರಯತ್ನ ಮಾಡಿದೆ. ಪಂಜಾಬಿ ಡಾಭಾಗಳು ನೀಡುವ ದೊಡ್ಡ ಲೋಟದ ಲಸ್ಸಿ, ಚಪಾತಿ, ಕುಳಿತುಕೊಳ್ಳಲು ಹುರಿಹಗ್ಗದ ಮಂಚ ಎಲ್ಲವೂ ಆಪ್ಯಾಯಮಾನವೇ ಸರಿ.

ಇನ್ನೂ ಕೊಡಗಿನ ಜಂಬೂರಿನಲ್ಲಿ ನನ್ನ ಬಾಪನಿಗೂ ಒಂದು ಹೋಟೆಲ್ ಕಂ ಅಂಗಡಿ ಇತ್ತು. ಲಕ್ಷ್ಮಿಜಾಲ, ಗಣೇಶ ಎಸ್ಟೇಟ್, ಸಿಸಿಎಲ್ (ಈಗ ಟಾಟಾ ಕಾಫಿ ಪ್ರೈವೇಟ್ ಲಿಮಿಟೆಡ್) ನಂತಹ ದೊಡ್ಡದೊಡ್ಡ ತೋಟಗಳಿಗೆ ತಮಿಳುನಾಡು, ಸಿಲೋನ್‌ನಿಂದ ಅಣ್ಣಾಚ್ಚಿಗಳು, ಉತ್ತರ ಕರ್ನಾಟಕ ಭಾಗದಿಂದ ಲಂಬಾಣಿಗಳು, ಹಾಸನ ಭಾಗದಿಂದ ಮೂಡುಸೀಮೆಯ ಕೂಲಿಯಾಳುಗಳು ಕುಟುಂಬ ಸಮೇತರಾಗಿ ಕಾಫಿ ಕುಯ್ಯುವ ಕೆಲಸಕ್ಕಾಗಿ ಬಹುಸಂಖ್ಯೆಯಲ್ಲಿ ಬರುತ್ತಿದ್ದರು. ಅವರಿಗೆ ಚಹ, ಕಾಫಿ, ಬನ್ಸ್, ವಡೆ, ಉಳ್ಳಿವಡೆ, ಬೆಲ್ಲದ ಉಂಡೆ, ಅಚ್ಚಪ್ಪಂ, ಪುಟ್ಟ್, ದೋಸೆ, ಹಡೆಯಂತಹ ವೈವಿಧ್ಯಮಯ ತಿಂಡಿಗಳ ಜೊತೆಯಲ್ಲಿ ಅಕ್ಕಿ, ಮೆಣಸು, ಉಪ್ಪಿನಾದಿಯಾಗಿ ಎಲ್ಲವೂ ಈ ಹೋಟೆಲ್ ಕಂ ಅಂಗಡಿಯಲ್ಲಿ ಸಿಗುತ್ತಿತ್ತು. ಶನಿವಾರ ಬಂತೆಂದರೆ ಸಾಕು, ವಾರಪೂರ್ತಿ ಕಾಫಿತೋಟಗಳಲ್ಲಿ ದುಡಿದ ತೋಟಕಾರ್ಮಿಕರು ಸಂಬಳದ ಹಣದೊಂದಿಗೆ, ಬಾಪನ ಹೋಟೆಲ್‌ಗೆ ಸಾಮಾಜು ಖರೀದಿಗಾಗಿ ಜಮಾಯಿಸುತ್ತಿದ್ದರು. ಆ ಊರಿನಲ್ಲಿ ಸುಮಾರು ನಾಲ್ಕುಕಿಲೋಮೀಟರ್ ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ ಯಾವ ಅಂಗಡಿ ಯಾಗಲೀ, ಹೋಟೆಲ್ ಆಗಲೀ ಇರಲಿಲ್ಲ. ಕರೆಂಟ್ ಇಲ್ಲದ, ಮುಳಿಹುಲ್ಲು, ಮಣ್ಣಿನ ಗೋಡೆಗಳಿರುವ, ಮಳೆ ಬಂದರೆ ಸೋರುವ ಈ ಹುಲ್ಲಿನ ಹೋಟೆಲಿನ ಒಳಗೆಯೇ ನಮ್ಮ ಮನೆ ಇತ್ತು. ದೊಡ್ಡ ಕಡಾಯಿಯೊಂದರಲ್ಲಿ ನೀರನ್ನಿಟ್ಟು ಅದರ ಬಾಯಿಗೆ ಸಣ್ಣ ರಂಧ್ರಮಾಡಿ ಟೀಪುಡಿಯನ್ನು ಹಾಕಲು ಬಟ್ಟೆಚೀಲ ತಯಾರಿಸಿ ತಳಕ್ಕೆ ಕೆಂಡವನ್ನು ಹಾಕಿ ಟೀ ಕಾಯಿಸುವ ಸಮೂರ್ ಚಾಯ್ ಮತ್ತು ದುಬಾಯಿಯಿಂದ ಮಾವ ತಂದ ಬ್ಯಾಟರಿಚಾಲಿತ ಟೇಪರೆಕಾರ್ಡರ್‌ನಲ್ಲಿ ಮೊಳಗುವ ಹಳೆ ಮಾಪ್ಪಿಳಪಾಟ್‌ಗಳೇ ನಮ್ಮ ಹೋಟೆಲಿನ ವಿಶೇಷತೆ. ಆದರೆ ಕೆಲವು ಸಮಯದ ನಂತರ ಹೋಟೆಲ್ ಬಿಟ್ಟು ಅಪ್ಪ ಆಟೋ ಚಾಲಕನಾದ ಮೇಲೆ ನನ್ನೊಳಗಿದ್ದ ಹೋಟೆಲ್ ಬಗೆಗಿನ ಮೋಹ ಮಾದಾಪುರದ ಮಮ್ಮದ್‌ಕಾಕನ ಹೋಟೆಲ್‌ನಲ್ಲಿ ಪಾತ್ರೆ ತೊಳೆಯುವ, ಸಪ್ಲೈ ಮಾಡುವ ಕಾರ್ಯಕ್ಕೆ ಸ್ಫೂರ್ತಿಯಾಯಿತು. ಬೆಳಗ್ಗೆ ಆರರಿಂದ ಎಂಟು ಮತ್ತು ಸಂಜೆ ಆರರಿಂದ ಹತ್ತು ನನ್ನ ಕೆಲಸದ ಸಮಯ. ಭಾನುವಾರ ಪೂರ್ತಿ ದಿನ. ಅಡುಗೆಯ ಬಗ್ಗೆ ಚೂರು ಪಾರು ಕಲಿತದ್ದೆ ಇಲ್ಲಿ. ಶೆಫ್ ಆಗಬೇಕೆಂದು ಆಸೆಪಡುತ್ತಿದ್ದ ನಾನು ಕನ್ನಡ ಅಧ್ಯಾಪಕನಾಗಿದ್ದು ಆಕಸ್ಮಿಕ.

●

